ಕಳುಹಿಸಿಕೊಟ್ಟಿದ್ದೇವೆ ಮಾನ್ಯ ಸದಸ್ಯರ ಶಿರಹಟ್ಟಿ ತಾಲ್ಲೂಕಿನ ಈ ಕಡೆ ಬದಿಯಲ್ಲಿ ನನ್ನ ಕ್ಷೇತ್ರ ಇದೆ ಇಲ್ಲಿಯೂ ಕೂಡ ಭತ್ತದ ಬೆಳೆಗೆ ಆಗಿರತಕ್ಕಂಥ ನಷ್ಟಕ್ಕೆ ಪರಿಹಾರ ಕೊಡಬೇಕೆಂದು ಜಿಲ್ಲಾಧಿಕಾರಿಯವರಿಗೆ ಈಗಾಗಲೇ ಸೂಚನೆ ಮಾಡಿದ್ದೇವೆ. ಗದಗ್ ಜಿಲ್ಲಾಧಿಕಾರಿಗಳಿಗೆ ಪ್ರಕೃತಿ ವಿಕೋಪದ ನಿಧಿಯಿಂದ ಪರಿಹಾರವನ್ನು ಕೊಡಲಿಕ್ಕೆ ಹಣದ ಅಭಾವ ಇದೆ ಎನ್ನುವುದು ಕಂಡು ಬಂದರೆ, ಆ ಪ್ರಸ್ತಾವನೆಯನ್ನು ಅವರು ಈಗಾಗಲೇ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರೆ ಕ್ರಮ ಕೈಗೊಳ್ಳುತ್ತೇವೆ, ಅವರು ಕಳುಹಿಸಿಕೊಡದಿದ್ದರೆ ಮಾನ್ಯ ಶಾಸಕರು ಅವರ ಜೊತೆಯಲ್ಲಿ ಮಾತನಾಡಿ ವಿಷಯವನ್ನು ನಮಗೆ ತಿಳಿಸಿದರೆ ನಮ್ಮ ನಿಯಮಾವಳಿಗಳ ಪ್ರಕಾರವಾಗಿ ಅವರಿಗೆ ಎಷ್ಟು ಹಣವನ್ನು ಕೊಡಬೇಕಾಗುತ್ತದೆ ಅಷ್ಟು ಹಣವನ್ನು ನಾವು ಖಂಡಿತವಾಗಿ ಕೂಡ ಬಾಳೆ, ಭತ್ತ ಮೊದಲಾಗಿರುವಂಥದ್ದವುಗಳ ಬಗ್ಗೆ ಕೊಡುತ್ತೇವೆ ಇನ್ನು ತಾವು ಅಲ್ಲಿರುವಂಥ ಹೆಸರು ಬಗ್ಗೆ ಪ್ರಸ್ತಾಪವನ್ನು ಮಾಡಿರುತ್ತೀರಿ, ಈಗ ಅಲ್ಲಿ ರೋಗ ಬಂದಿರತಕ್ಕಂಥದ್ದು ನಿಜವಿದೆ

ಶ್ರೀ ಜಿ ಎಸ್ ಗಡ್ಡದೇವರಮಠ ಮಾನ್ಯ ಅಧ್ಯಕ್ಷರೆ, ಇದರೊಳಗೆ ನನ್ನ ವೈಯಕ್ತಿಕದ ಜೊತೆಗೆ ಬಹಳಷ್ಟು ಜನ ಶಾಸಕರು ಇದಕ್ಕೆ ಬೆಂಬಲವನ್ನು ಕೊಡುತ್ತಾರೆಂದು ನಾನು ಭಾವಿಸಿ ಕೊಂಡಿದ್ದೇವೆ ಸುಮಾರು ಮೂರು ವರ್ಷಗಳುದ್ದಕ್ಕೂ ಬರಗಾಲವನ್ನು ಎದುರಿಸುವಂಥ ನಮಗೆ ಸಣ್ಣ ರೈತರೆಂದು ನೀವೇನು ಹೇಳಿ ರೈತರಲ್ಲಿ ತಾವು ವಿಂಗಡಿಸುತ್ತೀರಿ, ದೊಡ್ಡ ರೈತರದ್ದು ಸಣ್ಣ ರಐತರಿಗಿಂತ ಕಷ್ಟ ಪರಿಸ್ಥತಿ ಇವತ್ತು ಆಗಿದೆ ನಮ್ಮಲ್ಲಿ 40 ರಿಂದ 50 ಎಕರೆ ಜಮೀನುದಾರರು ಬಹುತೇಕ ಇವೊತ್ತು ಗುದ್ದಲಿಯನ್ನು ಹಿಡಿದುಕೊಂಡು ಬದುವು ಹಾಕುವುದಕ್ಕೆ ಹೊರಡುವಂಥ ಪ್ರಸಂಗ ದೊಡ್ಡ ರೈತರದ್ದು ಇವತ್ತು ಇದೆ ಅದಕ್ಕಾಗಿ ಈ ಸದನದ ಮುಖಾಂತರವಾಗಿ ನಾನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ, ರೈತರೊಳಗಹೆ ಸಣ್ಣ ಮತ್ತು ದೊಡ್ಡ ರೈತರೆಂದು ಬೀಜವನ್ನು ಕೊಡುವಂಥ ಸಂದರ್ಭದಲ್ಲಿಯಾಗಲಿ ಪರಿಹಾರವನ್ನು ಕೊಡುವಂಥ ಸಂದರ್ಭದಲ್ಲಿಯಾಗಲಿ ಇವತ್ತು ಯಾವುದನ್ನೂ ತಾವು ಬೇರ್ಪಡಿಸ ಬಾರದು, ಇವತ್ತು ಸಣ್ಣ ರಐತರಿಗೆ ಆದಂಥ ಏನು ನೋವು ಇದೆ, ಅದರ ಹತ್ತು ಪಟ್ಟು ನೋವು ದೊಡ್ಡ ರೈತರದ್ದು ಇದೆ, ಬಹುತೇಕ ಸರ್ಕಾರ ಆ ದಿಸೆಯೊಳಗೆ, ಸಣ್ಣರೈತರು ಎಂದು ಕ್ಲಾಸಿಫೈ ಮಾಡದೆ ದೊಡ್ಡ ರೈತರಿಗೂ ಸಹಿತ ಬೀಜವನ್ನು ಕೊಡುವಂಥ ವ್ಯವಸ್ಥೆಯೊಳಗಾಗಲಿ ಅಥವಾ ಪರಿಹಾರವನ್ನು ಕೊಡುವಂಥ ವ್ಯವಸ್ಥೆಯೊಳಗಾಗಲಿ ಸರ್ಕಾರ ಮುಂದೆ ಬರಬೇಕೆಂದು ಹೇಳಿ ತಮ್ಮ ಮುಖೇನವಾಗಿ ಈ ಸರ್ಕಾರವನ್ನು ನಾನು ಅಗ್ರಹವನ್ನು ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಒತ್ತಾಯವನ್ನು ಸಹಾನುಭೂತಿಯಿಂದ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ

ಅಧ್ಯಕ್ಷರು ಮಾನ್ಯ ಕಿರಣ್‌ಕುಮಾರ್‌ರವರು,ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ

ವಿಷಯ (ಣ) ಕಳ್ಳಂಬೆಳ್ಳ ವಿಧಾನ ಸಭಾ ಕ್ಷೇತ್ರದಲ್ಲಿ ಆಶ್ರಯ ಯೋಜನೆಯ ಫಲಾನುಭವಿಗಳಿಗೆ ಎರದನೇ ಕಂತಿನ ಹಣ ಬಿಡುಗಡೆ ಬಗ್ಗೆ

ಶ್ರೀ ಕೆ ಎಸ್ ಕಿರಣ್‌ಕುಮಾರ್ (ಕಳ್ಳಂಬೆಳ್ಳ) ಮಾನ್ಯ ಅಧ್ಯಕ್ಷರೆ, ಚುನಾವಣೆಯ ಸಮಯದಲ್ಲಿ ಹೆಚ್ಚುವರಿ ಪಟ್ಟಿಯೆಂದು ಹೇಳಿ ಆಶ್ರಯ ಮತ್ತು ರಾಜೀವಗಾಂಧಿ ಸನೆಗಳನ್ನು ಕೊಟ್ಟಿದ್ದಾರೆ ಆ ಪಟ್ಟಿಯನ್ನು ತಯಾರು ಮಾಡತಕ್ಕಂಥ ಸಂದರ್ಭದಲ್ಲಿ ಅಧಿಕಾರಿಗಳು ಮಾಡದೆ ಕೆಲವೊಂದು ಮಡಾರಿಗಳು ಕುಳಿತುಕೊಂಡು ಮಾಡಿ ಹೆಸರುಗಳು ತಪ್ಪಾಗಿರುತ್ತವೆ ಉದಾಹರಣೆಗಾಗಿ ಜಯಲಕ್ಷ್ಮೀ ಎನ್ನುವುದರ ಬದಲಾಗಿ ಸುಜಾತಾ ಎಂದು ಆಗಿ ಅಥವಾ ಗಂಡನ ಹೆಸರನ್ನು ತಪ್ಪಾಗಿ

ಮಾಡಿದ್ದು ಅದು ಅಪ್ರೂವ್ ಆಗಿ ಬಂದುಬಿಟ್ಟಿದೆ ರಿಜಿಸ್ಟ್ರೇಷನ್ ಸಮಯದಲ್ಲಿ ಹೆಸರು ತಪ್ಪಾಗಿ ಇರುವುದರಿಂದ ಅದನ್ನು ರಿಜಿಸ್ಟ್ರೇಷನ್ ಮಾಡಿಸುವುದಕ್ಕಾಗುತ್ತಿಲ್ಲ ಆ ಬದಲಾವಣೆಗಾಗಿ ಒಂದು ಅವಕಾಶವನ್ನು ಮಾಡಿಕೊಡಬೇಕು, ಕೆಲವೊಂದು ಅನರ್ಹರನ್ನು ಪಟ್ಟಿಯಲ್ಲಿ ಸೇರಿಸಿಬಿಟ್ಟಿದ್ದಾರೆ, ಸುವ್ಯವಸ್ಥಿತವಾಗಿ ಆ ಮನೆಯಲ್ಲಿ ಇರುವಂಥವರಿಗೆ ಹೆಚ್ಚುವರಿ ಮನೆಗಳು ಬಂದುಬಿಟ್ಟಿವೆ ಆ ಹೆಸರುಗಳನ್ನು ಬದಲಾಯಿಸಿ ಹೊಸ ವಸತಿಹೀನರಿಗೆ ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲು ಒಂದು ಬದಲಾವಣೆಯನ್ನು ಮಾಡಲಿಕ್ಕೆ ಸರ್ಕಾರ ಒಂದು ಆದೇಶ ಮಾಡಬೇಕೆಂದು ನಾನು ತಮ್ಮ ಮೂಲಕವಾಗಿ ಕೇಳುತ್ತೇನೆ ಮನೆಗಳನ್ನು ಈಗಾಗಲೇ ಅರ್ಧಭಾಗವನ್ನು ಕಟ್ಟಿದ್ದಾರೆ ಅದಕ್ಕೆ ಇನ್ನುವರೆಗೆ ಬಿಲ್ ಬಂದಿಲ್ಲವೆಂದು ಆ ಬಡಪಾಯಿಗಳು ಕಛೇರಿಗೆ ಅಲೆದು ಅಲೆದು ಸಾಕಷ್ಟು ದುಡ್ಡನ್ನು ಕಳೆದುಕೊಳ್ಳುತ್ತಿದ್ದಾರೆ ಆದ್ದರಿಂದ ಆ ಹಣವನ್ನು ಬಿಡುಗಡೆ ಮಾಡಿ ಆ ಫಲಾನುಭವಿಗಳಿಗೆ ಆದಷ್ಟು ಬೇಗನೆ ಹಣ ಪವತಿ ಮಾಡಬೇಕೆಂದು ಸರ್ಕಾರಕ್ಕೆ ನಾಣು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೇರೊಬ್ಬ ಶಾಸಕರು ಈ ವಿಷಯವಾಗಿ ಎತ್ತಿರುವ ವಿಷಯಕ್ಕೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ ಅನರ್ಹ ಫಲಾನುಭವಿಗಳು ಇದ್ದಾರೆ ಹೆಸರಿನಲ್ಲಿ ಬದಲಾವಣೆಗಳಾಗಿದ್ದರೆ ಅಲ್ಲಿರುವಂಥ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ಆ ಬದಲಾವಣೆಯನ್ನು ತರತಕ್ಕಂಥ ಅಧಿಕಾರ ಅಂತರ್ಗತವಾಗಿ ಅವರಿಗಿದೆ ಅದನ್ನು ಅವರು ಪ್ರಾಯಶಃ ಉಪಯೋಗಿಸಿರಲಿಕ್ಕಿಲ್ಲ, ಅದನ್ನು ತಾವು ಅವರ ಗಮನಕ್ಕೆ ತಂದು ಅದನ್ನು ತಾವು ಮಾಡಿ, ಅದಕ್ಕೆ ಮತ್ತೊಂದು ಹೊಸ ಸುತ್ತೋಲೆಯನ್ನು ಮಾಡಿ ಕಳುಹಿಸುವ ಅಗತ್ಯತೆ ಇಲ್ಲ ಆದರೆ ತಾವು ಏನು ಹೇಳಿದ್ದೀರಿ, ಎರಡನೆಯ ಕಂತಿನ ಹಣ ಏನು ಬಿಡುಗಡೆಯಾಗಿಲ್ಲವೆಂದು ಹೇಳಿದ್ದೀರಿ, ನಿರ್ದಿಷ್ಟವಾದ ಪ್ರಕರಣವನ್ನು ತಾವು ಬರೆದು ಕಳುಹಿಸಿದರೆ ನಾಣು ಆ ಸಂಬಂಧಪಟ್ಟ ಅಧಿಕಾರಿಗಳಿಂದ ಸಮಜಾಯಿಷಿಯನ್ನು ಕೇಳಿ ಸರಿಯಾದ ಉತ್ತರವನ್ನು ನಾಣು ತಮಗೆ ಒದಗಿಸಿಕೊಡುತ್ತೇನೆ, ಕಂತು ಬಿಡುಗಡೆಯಾಗದಿದ್ದರೆ ಅದನ್ನು ಒದಗಿಸುವಂಥ ವ್ಯವಸ್ಥೆ ಮಾಡುತ್ತೇನೆ

ವಿಷಯ (ತ) ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿನ ತಾಲ್ಲೂಕು ಪಂಚಾಯಿತಿಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ

†ಶ್ರೀ ಎಸ್ ಎನ್ ಕೃಷ್ಣಯ್ಯಶೆಟ್ಟ (ಮಾಲೂರು) ಮಾನ್ಯ ಅಧ್ಯಕ್ಷರೆ, ನನ್ನ ವಿಧಾನಸಭೆ ಕ್ಷೇತ್ರದಲ್ಲಿ ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳವರೆಗೆ ಅವ್ಯವಹಾರವಾಗಿದೆ, ಅಧಿಕಾರಿಗಳು ಆ ಹಣವನ್ನು ದುರುಪಯೋಗಪಡಿಸಿ ಕೊಂಡಿದ್ದಾರೆ ಅದರಲ್ಲಿ ಸಾಕಷ್ಟು ಅಧಿಕಾರಿಗಳು ಸಸ್ಪೆಂಡಾಗಿದ್ದಾರೆ ಆದರೆ ಅದರ ಬಗ್ಗೆ ಮುಂದೆ ಏನಾಗಿದೆ ಎನ್ನುವುದರ ಬಗ್ಗೆ ನಮಗೆ ಒಂದು ವರದಿ ಬೇಕಾಗಿದೆ, ಈ ಒಂದು ದುರುಪಯೋಗದಿಂದ ಯಾವುದೇ ಒಂದು ರೀತಿಯ ಹಣ ತಾಲ್ಲೂಕಿಗೆ ಬರದಿರುವುದರಿಂದ ಬಹಳ ಕಷ್ಟವಾಗಿದೆ ಅದಕ್ಕೆ ತುರ್ತಾಗಿ ಹಣವನ್ನು ಖರ್ಚು ಮಾಡಬೇಕಾಗಿದೆ, ಯಾವುದೇ ಕೆಲಸಕ್ಕೂ ಹಣ ಇಲ್ಲದಿರುವುದರಿಂದ ನಮ್ಮ ತಾಲ್ಲುಕು ಮಟ್ಟದ ಸಮಿತಿ ಒಂದು ದುಸ್ಥಿತಿಯಲ್ಲಿದೆ ಅದರ ಜೊತೆಯಲ್ಲಿ ಹಿಂದಿನ ಸರ್ಕಾರದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದೇವೆಂದು ಸ್ಪಿಲ್‌ಒವರ್ ವರ್ಕ್‌ನಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ತೋರಿಸಿದ್ದಾರೆ ಈ ವರ್ಷ ಬಂದಿರುವ 50 ಲಕ್ಷ ರೂ ಗಳ ಹಣ ಅದಕ್ಕೆ ಖರ್ಚು ಮಾಡುವುದಕ್ಕಾಗಿ